

## ಅಂತರಿಕ್ಷದಲ್ಲಿ ಮಾನವ

ಡಾ. ಬಿ.ಆರ್. ಗುರುಪ್ರಸಾದ್ ಬರೆದಿರುವ 'ಅಂತರಿಕ್ಷದಲ್ಲಿ ಮಾನವ' (ಏ.15ರ ಸಂಚಿಕೆ) ಲೇಖನ ತುಂಬಾ ಮಾಹಿತಿಪೂರ್ಣವಾಗಿದೆ. ಮಾನವನ ಎಣೆಯಿಲ್ಲದ ಕೌತುಕಕ್ಕೆ ಅವನು ಮಾಡುತ್ತ ಬಂದಿರುವ ಬಾಹ್ಯಾಕಾಶ ಪ್ರಯೋಗಗಳೇ ಸಾಕ್ಷಿ. ಈ ದಿಸೆಯಲ್ಲಿ ಮಾನವನು ಇಟ್ಟ ಹೆಜ್ಜೆಗಳನ್ನು ಲೇಖಕರು ಚೆನ್ನಾಗಿ ವಿವರಿಸಿದ್ದಾರೆ. ಈ ಪ್ರಯೋಗಗಳಲ್ಲಿ ಭಾರತ ಮೂಲದ ಬಾಹ್ಯಾಕಾಶ ಯಾತ್ರಿಗಳ ಪಾತ್ರವೂ ಇರುವುದು ಹೆಮ್ಮೆಯ ವಿಷಯ.

—ಆಧ್ಯಾ ಭೈರಥಿ, ಬೆಂಗಳೂರು



## ಮೊಬೈಲ್ ಇಲ್ಲದೆ...

ಏ. 15ರ ಸಂಚಿಕೆಯಲ್ಲಿ ಸ್ವಯಂಪ್ರಭಾ ಅವರು ಬರೆದಿರುವ 'ಮೊಬೈಲ್ ಇಲ್ಲದೆ ಮಕ್ಕಳು ಊಟ ಮಾಡಲ್ವಾ' ಲೇಖನ ಚೆನ್ನಾಗಿತ್ತು. ಈ ಕಾಲದಲ್ಲಿ ಖಂಡಿತ ಮಾಡಲ್ಲ. ನಗರದಲ್ಲಿ ವಾಸಿಸುವ ತಾಯಂದಿರಿಗೆ ಪ್ರಾಣಿ, ಪಕ್ಷಿಗಳನ್ನು ತೋರಿಸಿಕೊಂಡು ಮಕ್ಕಳಿಗೆ ಊಟ ಮಾಡಿಸುವ ವ್ಯವಧಾನವಾಗಲಿ, ಸಹನೆಯಾಗಲೀ ಇರುವುದಿಲ್ಲ. ಆದುದರಿಂದ ಅವರು ಮೊಬೈಲ್, ಟೀವಿಗೆ ಮೊರೆಹೊಗದೆ ಬೇರೆ ದಾರಿಯಿಲ್ಲ.

—ವಿಜಯ ಪ್ರಸಾದ್, ಬೆಂಗಳೂರು

ಲೇಖನವನ್ನು ಓದುವಾಗ ಅಮ್ಮ ಚಂದಮಾಮನತ್ತ ಬೆರಳು ಮಾಡಿ ತೋರಿ ತುತ್ತನ್ನು ಬಾಯಿಗಿಡುತ್ತಿದ್ದ ನಮ್ಮದೇ ಶೈಶವದ ದಿನಗಳು ನೆನಪಾದವು. ಊಟ ಮಾಡಿಸುವಾಗ ಅಥವಾ ರಚ್ಚೆ ಹಿಡಿದ ಮಕ್ಕಳ ಗಮನವನ್ನು ಬೇರೆಡೆಗೆ ಸೆಳೆಯಲು ಮೊಬೈಲ್ ಬಳಕೆ ಮಾಡುವುದರಿಂದ ಮೆದುಳಿನ ಬೆಳವಣಿಗೆಯ ಮೇಲೆ ದುಷ್ಪರಿಣಾಮಗಳಾಗುತ್ತವೆ. ಕುಟುಂಬದ ಸದಸ್ಯರೊಡನಾಟ ಮಗುವಿನ ಸಾಮಾಜಿಕ ಬೆಳವಣಿಗೆಗೆ ಪೂರಕವಾಗಿರುತ್ತದೆ. ರಚ್ಚೆ ಹಿಡಿದ ಮಗು ತನ್ನನ್ನು ತಾನೇ ಸಮಾಧಾನಪಡಿಸಿಕೊಳ್ಳುವುದನ್ನು ಕಲಿತುಕೊಳ್ಳಲು ಮೊಬೈಲ್ ಅಡ್ಡಿಯಾಗುವುದರಲ್ಲಿ ಅನುಮಾನವಿಲ್ಲ. ಮಗುವಿಗೆ ಊಟ ಮಾಡಿಸುವುದರಲ್ಲಿರುವ ಆನಂದವನ್ನು ಅನುಭವಿಸಲು ತಾಯಂದಿರು ಮಾನಸಿಕವಾಗಿ ಅಣಿಯಾಗಬಾರದೇಕೆ?

—ಡಾ. ಎಂ.ಟಿ. ಮಂಜುನಾಥ್, ಬೆಂಗಳೂರು

## ಹೂ ಒಣಗಿ....

ಜೀವನ್ ಶೆಟ್ಟಿ ಬರೆದ 'ಹೂ ಒಣಗಿ ಅಗರ ಬತ್ತಿಯಾಗಿ' ಲೇಖನ (ಏ. 15ರ ಸಂಚಿಕೆ), ಸರಕಾರಿ ಉದ್ಯೋಗಕ್ಕಾಗಿ ಹಾತೊರೆಯುತ್ತಿರುವ ವಿದ್ಯಾವಂತ ಯುವಕರ ಕಣ್ತೆರೆಸುವಂತಿದೆ. ಎಂಜಿನಿಯರಿಂಗ್ ಪದವೀಧರ, ಕಾನ್ಪುರದ ನಿಖಿಲ್ ಗಂಪಾ, ಮೊದಲ ಪ್ರಯತ್ನದಲ್ಲಿ ಯಶಸ್ವಿಯಾಗದಿದ್ದರೂ, ಛಲ ಬಿಡದೆ, ದೇವಸ್ಥಾನಗಳಿಂದ ತ್ಯಾಜ್ಯ ಹೂಗಳನ್ನು ಸಂಗ್ರಹಿಸಿ ಅದರಿಂದ ಪರಿಮಳಭರಿತ ಅಗರಬತ್ತಿ ತಯಾರಿಕೆಯಲ್ಲಿ ಯಶಸ್ಸು ಗಳಿಸಿದ್ದಾರೆ. ಅಲ್ಲದೆ ಇದರ ಮೂಲಕ ಅನೇಕರಿಗೆ ಕೆಲಸ ಸಿಗುವಂತಾಗಿದೆ. ಇಂತಹ ಸ್ಟಾರ್ಟ್‌ಅಪ್ ಉದ್ಯಮಕ್ಕೆ ಕೇಂದ್ರ ಸರಕಾರದ ಸಹಾಯ ಇದೆ. ನಿರುದ್ಯೋಗಿ ಯುವಕರು ಇತ್ತ ಕಡೆ ಗಮನ ಹರಿಸುವಂತಾಗಬೇಕು.

—ಬಾಣಾವರ ನಾಗರಾಜ, ಬೆಂಗಳೂರು



ಮಂದಿರ, ಮಸೀದಿಗಳಿಂದ ತ್ಯಾಜ್ಯ ಹೂವುಗಳನ್ನು ಸಂಗ್ರಹಿಸಿ ಅವುಗಳಿಂದ ಧೂಪ, ದ್ರವ್ಯಗಳನ್ನು ತಯಾರಿಸುವ ಕಾನ್ಪುರದ ಯುವಕ ನಿಖಿಲ್ ಗಂಪಾ ಅವರ ಅಗರಬತ್ತಿ ಯಾನವನ್ನು ಜೀವನ ಶೆಟ್ಟಿಯವರು ಸೊಗಸಾಗಿ ಚಿತ್ರಿಸಿದ್ದಾರೆ.

—ಪಿ. ಜಯವಂತ ಪೈ, ಕುಂದಾಪುರ

ಒಣಗಿದ ಹೂವನ್ನು ಬಳಸಿ, ಅಗರಬತ್ತಿ ತಯಾರಿಸುವ ರಸಕಾರ್ಯ ರಸವತ್ತಾಗಿದೆ.

—ಸಾವಿತ್ರಿ ಶ್ಯಾನುಭಾಗ್, ಕುಂದಾಪುರ

## ಚಿತ್ತ ಶುದ್ಧಿಯ ಅರ್ಥಪೂರ್ಣ ಬರಹ

ಏ. 15ರ ಸಂಚಿಕೆಯ 'ವಿಚಾರ ಲಹರಿ'ಯಲ್ಲಿ ಪುರಂಜೀವಿ ಬರೆದಿರುವ 'ಚಿತ್ತ ಶುದ್ಧಿ'ಯ ಕುರಿತ ಲೇಖನ ಅರ್ಥವತ್ತಾಗಿ ಮೂಡಿಬಂದಿದೆ. ಜಿ.ವಿ. ಅರುಣ ಬರೆದ 'ಹಬ್ಬಕ್ಕೆ ಹೊಸ ಸೀರೆ' ಹಾಸ್ಯಲೇಖನ ವಾಸ್ತವಕ್ಕೆ ಹತ್ತಿರವಾದುದು. ಕಸದಿಂದ ರಸ ಮಾಡಿದ ನಿಖಿಲಾ ಗಂಪಾ ಎಂಬ ಯುವಕನ ಕಥೆ ಕುತೂಹಲ ಕೆರಳಿಸಿತು.

—ಸರಸ್ವತಿ ಭೋಸ್ಲೆ

ಏ. 15ರ ಸಂಚಿಕೆಯಲ್ಲಿ ಪ್ರಕಟವಾದ ಕೆ. ಜಯಲಕ್ಷ್ಮಿ ಅವರ ಲೇಖನ 'ಹೆರಿಗೆ ಸಮಯದಲ್ಲಿ ಬಳಸುವ ಎಪಿಡುರಲ್ ಸುರಕ್ಷಿತವೆ' ಅರಿವು ಮೂಡಿಸುವ ಹಾಗಿದೆ. ಸಾಮಾನ್ಯವಾಗಿರುವ ಸಿಸೇರಿಯನ್ ಹೆರಿಗೆ ದಿನಗಳಲ್ಲಿ ಇಂದು ಬೆನ್ನುನೋವು, ಮುಟ್ಟಿನ ಸಮಸ್ಯೆಗಳು ಶಾಶ್ವತವಾಗಿ ಉಳಿಯುತ್ತವೆ.

—ಕೊಟ್ಟೂರು ರಾಜಶೇಖರ ಗೌಡ, ಹರಪನಹಳ್ಳಿ

## ಹಬ್ಬಕ್ಕೊಂದು ಹೊಸ ಸೀರೆ

ಏ. 15ರ ಸಂಚಿಕೆಯಲ್ಲಿ ಜಿ.ವಿ. ಅರುಣ ಅವರು ಬರೆದ ಹಾಸ್ಯ ಲೇಖನ ಚೆನ್ನಾಗಿದೆ. ಕೆಲವು ಸಲ ಹೆಂಡತಿ ತನಗೆ ಯಾವ ಕಲರ್ ಸೀರೆ ಬೇಕು ಎಂಬ ಗೊಂದಲದಲ್ಲಿಯೇ ಇರುತ್ತಾಳೆ. ಸೀರೆಯ ಬಗ್ಗೆ ಏನೂ ಅರಿಯದ ಗಂಡ, ಹೆಂಡತಿಗೆ ಸೀರೆ ತರುವ ಯೋಚನೆ ಮಾಡಿ ತಾನೇ ಬೇಸ್ತು ಬೀಳುತ್ತಾನೆ. ಅಂಗಡಿಯವನ ಬುದ್ಧಿವಂತಿಕೆಯನ್ನು ಮೆಚ್ಚಬೇಕು. ಗಿರಾಕಿಗಳ ಮನಸ್ಸನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಇದು ಎಲ್ಲರ ಮನೆಯ ಕಥೆ.

—ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

## ಅರ್ಥಪೂರ್ಣ ಕಥೆ

ಏ. 15ರ ಸಂಚಿಕೆಯಲ್ಲಿ ಬಿದಲೋಟಿ ರಂಗನಾಥ್ ಅವು ಬರೆದ 'ಬುದ್ಧ ಜಂಗಮ' 40–50 ವರ್ಷಗಳ ಹಿಂದಿನ ವಾಸ್ತವ ಸ್ಥಿತಿಗೆ ಉದಾಹರಣೆಯಾಗಿದೆ. ಪ್ರಸ್ತುತ ಎಲ್ಲಾ ವರ್ಗದ ಜನರು ಈ ಸ್ಥಿತಿಯಲ್ಲಿ ಇದ್ದಾರೆ. ಆದ್ದರಿಂದ ಸಂದೇಶ ಎಲ್ಲ ಶೋಷಿತರಿಗೂ ಅನ್ವಯಿಸುತ್ತದೆ.

—ಜಗದೀಶ ಬಿ. ಹೊಸೂರು, ಮೈಸೂರು

## ಭಾರತೀಯ ಐಕಾನ್

'ಸುಧಾ' ಬಳಗಕ್ಕೆ ಯುಗಾದಿ ಪ್ಲವ ಸಂವತ್ಸರದ ಶುಭಾಶಯಗಳು. ಅಪ್ರತಿಮ ಗಾಯಕಿ 'ಭಾರತೀಯ ಐಕಾನ್' ಆಶಾ ಬೋಂಸ್ಲೆ ಬಗ್ಗೆ ಪ್ರವೀಣ ಕುಲಕರ್ಣಿಯವರು ಪರಿಣಾಮಕಾರಿಯಾಗಿ ಬರೆದಿದ್ದಾರೆ. ವೈಯುಕ್ತಿಕ ಬದುಕಿನ ಏಳುಬೀಳುಗಳ ನಡುವೆ ತಮ್ಮ ಕಂಠಸಿರಿ ಕಾಪಾಡಿಕೊಂಡು ಈಗಲೂ ತಮ್ಮ ಗಾನಸುಧೆಯನ್ನು ಪ್ರಪಂಚಕ್ಕೆ ನೀಡುತ್ತಿರುವುದು ಪ್ರಸಂಶನೀಯ.

—ಕಮಲಾದೇವಿ ಆರ್. ಎಚ್., ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in